**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक-संस्कृत-विश्वविद्यालय:**

श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

ಸಂಖ್ಯೆ:ಕಸಂವಿ/ಪರೀಕ್ಷಾಂಗ/ ಟೆಂಡರ್ಸ್–01/2022–23, ದಿನಾಂಕ: 03.09.2022.

## ಸೂಚನಾ ಪತ್ರ

ವಿಷಯ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಆವಶ್ಯಕವಿರುವ ಪ್ರಶ್ನೆ ಪತ್ರಿಕೆಗಳನ್ನು, ಖಾಲಿ ಉತ್ತರ ಪತ್ರಿಕೆಗಳನ್ನು, ಗೌಪ್ಯ ಲಕೋಟೆಗಳನ್ನು ಮುದ್ರಿಸಿ ಸರಬರಾಜು ಮಾಡಲು ದರಪಟ್ಟಿಗಳನ್ನು ಆಹ್ವಾನಿಸುವುದರ ಬಗೆಗೆ.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ,ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನ ಮಹಾವಿದ್ಯಾಲಯಗಳ 2021–22ನೇ ಸಾಲಿನ **ಬಿ.ಎ ಶಾಸ್ತ್ರೀ ಮತ್ತು ಎಂ.ಎ ಆಚಾರ್ಯ ಪರೀಕ್ಷೆಗಳಿಗೆ ಹಾಗೂ ಪುನರಾವರ್ತಿತ** ವಿದ್ಯಾರ್ಥಿಗಳ ಪರೀಕ್ಷೆಗಳಿಗೆ ಆವಶ್ಯಕವಿರುವ ಪ್ರಶ್ನೆಪತ್ರಿಕೆಗಳನ್ನು, ಖಾಲಿ ಉತ್ತರ ಪತ್ರಿಕೆಗಳನ್ನು, ಹಾಗೂ ಇನ್ನು ಇತರೆ ಪರೀಕ್ಷಾ ಸಾಮಾಗ್ರಿಗಳನ್ನು ಮುದ್ರಿಸಿ ಸರಬರಾಜು ಮಾಡಲು ದರಪಟ್ಟಿಗಳನ್ನು ಆಹ್ವಾನಿಸಲಾಗಿದ್ದು,ಸದರಿ ಸರಬರಾಜು ಸಾಮಾಗ್ರಿಗಳಿಗೆ ತಗುಲುವ ವೆಚ್ಚಗಳಿಗೆ ದರಪಟ್ಟಿಗಳನ್ನು ಸೂಚನಾ ಪತ್ರವನ್ನು ಹೊರಡಿಸಿದ ದಿನಾಂಕದಿಂದ 07 ದಿನಗಳೊಳಗಾಗಿ **ಮಾನ್ಯ ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಚಾಮರಾಜಪೇಟೆ–560018. ಇವರ** ವಿಳಾಸಕ್ಕೆ ಸಲ್ಲಿಸಲು ಸೂಚಿಸಿದೆ ಹಾಗೂ **ದರಪಟ್ಟಿಯನ್ನು ಸಲ್ಲಿಸುವ ಸಂಸ್ಥೆಗಳು ಕಡ್ಡಾಯವಾಗಿ ಜಿ.ಎಸ್.ಟಿ(G.S.T)ನೋಂದಣಿ ಸಂಖ್ಯೆಯನ್ನು ಹೊಂದಿರತಕ್ಕದ್ದು**.ಸಾಮಾಗ್ರಿಗಳ ವಿವರಗಳು ಈ ಕೆಳಕಂಡಂತಿದೆ.

| ಕ್ರ.ಸಂ | ವಿವರಗಳು | ವಿಷಯ | ಪುಟಗಳು | ಅಳತೆ | ಪ್ರಮಾಣ | ಕಾಗದ ಗುಣಮಟ್ಟ |
|---|---|---|---|---|---|---|
| 1. | ನಿದರ್ಶನ ನಮೂನೆ (ಹಾಜರಾತಿ ತಃಖ್ತೆ) | – | 2 | A4 | 3000 | 70gsm |
| 2. | ಖಾಲಿ ಉತ್ತರ ಪತ್ರಿಕೆಗಳು | – | 24 | A4 | 20000 | 70gsm |
| 3. | ಮೌಲ್ಯಮಾಪಕರ ಬಿಲ್ಲುಗಳು | – | 1 | A4 | 600 | 70gsm |
| 4. | ಪ್ರಶ್ನೆ ಪತ್ರಿಕೆಗಳ ಮುದ್ರಣ | 244 | 2/4 | A4 | 14000 | 70gsm |
| 5. | ಕ್ರೋಢೀಕೃತ ಸಂಭಾವನೆ ಬಿಲ್ಲುಗಳು | – | 2 | A3 | 1000 | 70gsm |
| 7. | ಕ್ರೋಢೀಕೃತ ಗೈರುಹಾಜರಿ ಅರ್ಜಿಗಳು | – | 2 | A4 | 500 | 70gsm |
| 8. | ಗೋಪ್ಯ ಲಕೋಟೆಗಳು | – | 1 | A3 | 5000 | 90gsm |
| 9. | ಮೌಲ್ಯ ಮಾಪನ ಅಂಕಗಳ ನಮೂದು ನಮೂನೆ | – | 1 | A4 | 3000 | 70gsm |

**ವಿಶೇಷ ಸೂಚನೆಗಳು:**

1. ದರಪಟ್ಟಿಯನ್ನು ಸಲ್ಲಿಸುವ ಸಂಸ್ಥೆಗಳು ಪ್ರಶ್ನೆಪತ್ರಿಕೆಗಳನ್ನು ಮುದ್ರಣ ಮಾಡುವ ಕಾರ್ಯದಲ್ಲಿ ಕಡ್ಡಾಯವಾಗಿ ಗೌಪ್ಯತೆಯನ್ನು ಕಾಪಾಡಬೇಕು.
2. ಕೇಂದ್ರವಾರು ಲಕೋಟೆಗಳನ್ನು ಸೆಕ್ಯುರಿಟಿ ಸೀಲ್‌ನಿಂದ ಭದ್ರಿತವಾಗಿರಿಸತಕ್ಕದ್ದು ಹಾಗೂ ಲಕೋಟೆಗಳ ಮೇಲೆ ಪ್ರಶ್ನೆಪತ್ರಿಕೆಯ ಸಂಖ್ಯೆ, ಪರೀಕ್ಷಾ ದಿನಾಂಕವನ್ನು ಮುದ್ರಿಸಬೇಕು.
3. ಪ್ರಶ್ನೆಪತ್ರಿಕೆಗಳಿಗೆ ಸಂಬಂಧಿಸಿದಂತೆ ವಿಸ್ತೃತವಾದ ವಿವರಗಳನ್ನು ಪರೀಕ್ಷಾ ವಿಭಾಗದಿಂದ ಪಡೆಯಬಹುದು.
4. ಪ್ರಶ್ನೆಪತ್ರಿಕೆ ಹಾಗೂ ಉತ್ತರ ಪತ್ರಿಕೆಗಳ ಸಂಖ್ಯೆಯಲ್ಲಿ ಅಲ್ಪಪ್ರಮಾಣದ ಬದಲಾವಣೆಯ ಸಾಧ್ಯತೆಗಳಿರುತ್ತವೆ.
5. ದರಪಟ್ಟಿಯನ್ನು ಸಲ್ಲಿಸುವ ಸಂಸ್ಥೆ/ಕಂಪನಿಗೆ ಕಡ್ಡಾಯವಾಗಿ ಸಂಸ್ಕೃತ, ಕನ್ನಡ, ಆಂಗ್ಲ ಹಾಗೂ ಹಿಂದಿ ಭಾಷೆಗಳಲ್ಲಿ ಪ್ರಶ್ನೆಪತ್ರಿಕೆಗಳನ್ನು ಮುದ್ರಿಸುವ/ಮುದ್ರಿಸಿರುವ ಅನುಭವವಿರಬೇಕು.
6. ದರಪಟ್ಟಿಯನ್ನು ಸಲ್ಲಿಸುವ ಸಂಸ್ಥೆ/ಕಂಪನಿಗೆ ಕನಿಷ್ಠ 03 ವರ್ಷಗಳ ಪರೀಕ್ಷಾ ಕಾರ್ಯವನ್ನು ಯಾವುದೇ ಸಂಸ್ಕೃತ ಅಥವಾ ಇತರೆ ವಿಶ್ವವಿದ್ಯಾಲಯದಲ್ಲಿ/ಗಳಲ್ಲಿ ನಿರ್ವಹಿಸಿದ ಅನುಭವವಿರಬೇಕು ಮತ್ತು ಸಂಬಂಧಿಸಿದ ದಾಖಲೆಯನ್ನು ದರಪಟ್ಟಿಯೊಂದಿಗೆ ಸಲ್ಲಿಸಬೇಕು.

P. vmy

ಪರೀಕ್ಷಾ ನಿಯಂತ್ರಕರು

Controller of Exams
Karnataka Sanskrit Universit
PMK Road, Chamarajpet
Bangalore-560 018

**ಪ್ರತಿಗಳು:–**

- ಮಾನ್ಯ ಕುಲಪತಿಗಳ ಆಪ್ತಶಾಖೆ
- ಮಾನ್ಯ ಕುಲಸಚಿವರ ಆಪ್ತಶಾಖೆ
- ಹಣಕಾಸು ಅಧಿಕಾರಿಗಳ ಆಪ್ತಶಾಖೆ
- ಸೂಚನಾ ಫಲಕ
- ಕಛೇರಿ ಪ್ರತಿ